ಶ್ರೀ ಎಂ.ವೈ. ಪಾಟೀಲ್ :– ಆಗಬಹುದು.

ಕಬಿನಿ ಜಲಾಶಯದ 2ನೇ ಹಂತವನ್ನು ಕಾರ್ಯರೂಪಕ್ಕೆ ತರುವುದು.

290 (2300) ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ 2ನೇ ಹಂತ ಶಂಕುಸ್ಥಾಪನೆಯಾಗಿ ಎಷ್ಟು ವರ್ಷವಾಯಿತು;

ಆ) ಇದರ ಅಂದಾಜು ವೆಚ್ಚವೆಷ್ಟು;

ಇ) ಯಾವಾಗ ಇದನ್ನು ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) 20 ವರ್ಷವಾಯಿತು. (ಕಬಿನಿ ಎರಡನೇ ಹಂತದ ಯೋಜನೆಗೆ 1987 ರಲ್ಲಿ ಶಂಕುಸ್ಥಾಪನೆ ಮಾಡಲಾಗಿತ್ತು)

ಆ) ರೂ.702.00 ಕೋಟಿಗಳು. (ಸಮಗ್ರ ಕಬಿನಿ ಯೋಜನೆಯ ಅಂದಾಜು 2002–03ರ ದರದಂತೆ ರೂ.1233.00 ಕೋಟಿಗಳಲ್ಲಿ ಈ ಮೊತ್ತವೂ ಸೇರಿರುತ್ತದೆ.)

ಇ) ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ತೀರ್ಮಾನಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್ :– ಇದೊಂದು ಕನಸು. ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ. ಕಾವೇರಿ ನ್ಯಾಯ ಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಸರ್ಕಾರಕ್ಕೆ ನಂಬಿಕೆಯಿಲ್ಲ. ನಾವು ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರಕ್ಕೆ ನಂಬಿಕೆಯಿಲ್ಲ. ನೀವು ಈ ರೀತಿಯ

ಉತ್ತರ ಕೊಟ್ಟರೆ, ನಾನು ನಿಮಗೆ ನೇರವಾಗಿ ಹೇಳುತ್ತೇನೆ, ಅವರ ತೀರ್ಮ ಇದಕ್ಕೂ ಸಂಬಂಧ ಪಡದ ರೀತಿ, ನಾವು ಕಬಿನಿ ಜಲಾಶಯ ಕಟ್ಟಿದ್ದು ಏನು ಎಂದು ಹೇಳಿದರೆ, ಕೇಂದ್ರದ ಅನುಮತಿಯನ್ನು ನಾವು ಕೇಳಲಿಲ್ಲ. ಆಗ ನಾವು ಕರ್ನಾಟಕದಲ್ಲಿ ಕಬಿನಿ ಜಲಾಶಯ ಕಟ್ಟಿದೆವು. ಅದೇ ರೀತಿ ನೀವು ಕಬಿನಿ ಆರಂಭವಾಗಿ ಶಂಕುಸ್ಥಾಪನೆಯಾಗಿ 20 ವರ್ಷವಾಯಿತು. 20 ವರ್ಷದಿಂದ ಅದು ನೆನೆಗುದಿಗೆ ಬಿದ್ದಿದೆ ಈ ಜಲಾಶಯ ಆದರೆ, ಚಾಮರಾಜ ನಗರ ಪ್ರದೇಶ ಈ ಕಡೆ ಗುಂಡ್ಲುಪೇಟೆ ಎಲ್ಲಾ ಕಡೆ ಅನುಕೂಲವಾಗತಕ್ಕಂಥ ಒಂದು ಅತ್ಯುನ್ನತವಾದಂಥ ಯೋಜನೆ. ಇದನ್ನು ನೀವು ಮಾಡಲಿಲ್ಲವೆಂದರೆ, ಇದು ಮುಂದೆ ಆಗುತ್ತದೋ ಇಲ್ಲವೋ ಎನ್ನುವ ಅಪನಂಬಿಕೆ ನನಗಿದೆ. ಆದ್ದರಿಂದ ನೀವು ಸ್ಪಷ್ಟಪಡಿಸಬೇಕು. ಈ ರೀತಿ ಉತ್ತರ ಬೇಡ. ನೀವು ಕಾವೇರಿ ತೀರ್ಪನ್ನು ನೋಡಿಕೊಂಡು ಮುಂದೆ ಯಾವ ರೀತಿಯಾಗಿ ಮಾಡುತ್ತೇವೆಂದರೆ, ನಿಮ್ಮ ಸರ್ಕಾರ ಕಾವೇರಿ ತೀರ್ಪನ್ನು ಒಪ್ಪಿಕೊಳ್ಳುತ್ತೀರೆಂದು ಅರ್ಥವಾಗುತ್ತದೆ. ತೀರ್ಮ ಏನೇ ಕೊಡಲಿ, ನಾವು ಕಬಿನಿ ಎರಡನೇ ಹಂತ ಮಾಡುತ್ತೇವೆ. ಅದನ್ನು ಏನು ಮಾಡುತ್ತೀರಿ ತಾವು ಹೇಳಬೇಕು.

ಶ್ರೀ ಆರ್. ಧ್ರುವನಾರಾಯಣ :– ಕಬಿನಿ ಎರಡನೇ ಹಂತ ನನ್ನ ಮತಕ್ಷೇತ್ರಕ್ಕೆ ಸುಮಾರು 90 ಭಾಗಕ್ಕೆ ನೀರಾವರಿಯಾಗತಕ್ಕಂಥ ಯೋಜನೆ. ಮಾನ್ಯ ಸಚಿವರು ಈ ತೀರ್ಮ ಬರುವುದಕ್ಕೆ ಮುಂಚೆ ನಮ್ಮ ಭಾಗಕ್ಕೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಈ ಕಬಿನಿ ಎರಡನೇ ಹಂತವನ್ನು ಜಾರಿಗೆ ತರುತ್ತೇನೆಂದು ಹೇಳಿದ್ದರು. ಈ ಕಬಿನಿ ಎರಡನೇ ಹಂತಕ್ಕೆ 10 ಟಿಎಂಸಿ ನೀರು ಸಾಕಾಗುತ್ತದೆ. ಅದನ್ನು ಮೊಬಿಲೈಸ್ ಮಾಡತಕ್ಕಂಥದ್ದರ ಬಗ್ಗೆ ಹೇಗೆ ಎಂದು ಅಧಿಕಾರಿಗಳು ಮಾತನಾಡಿಕೊಂಡಿದ್ದಾರೆ. ದಯಮಾಡಿ ಸಚಿವರಲ್ಲಿ ವಿನಂತಿ ಏನೆಂದರೆ, ಇದರಲ್ಲಿ ಯಾವುದೇ ರೀತಿಯ ತೀರ್ಮ ಇಲ್ಲ. ತೀರ್ಮ ಈಗಾಗಲೇ ಹೊರಗಡೆ ಬಂದಿದೆ. Expansion ಗೆ ಯಾವುದೇ ತರಹ ತೊಂದರೆಯಾಗುವುದಿಲ್ಲ. ಆದ್ದರಿಂದ ಉಳಿಕೆ ನುಗು ಏತ ನೀರಾವರಿ ಯೋಜನೆ ಇರಬಹುದು, ಇದರಲ್ಲಿ ಸುಮಾರು 10 ಟಿಎಂಸಿ ಸೇವಿಂಗ್ಸ್ ಬರುತ್ತದೆ. ಇದನ್ನು ಮ್ಯಾನೇಜ್ ಮಾಡಬಹುದಾಗಿದೆ. ಒಂದು ಎಕರೆಯೂ ಕೂಡ ವಿಸ್ತಾರವಾಗುವುದಿಲ್ಲವೆನ್ನುವ ಅಡೆತಡೆಗಳು, ಈ ತೀರ್ಮ ಬಂದ ಮೇಲೆ

ಏನಿಲ್ಲ. ಈಗ ಅಡೆತಡೆಗಳು ಯಾವುದೂ ಇಲ್ಲ. ಮೊದಲಾದರೆ ಒಂದು ಎಕರೆ ವಿಸ್ತರಣೆ ಮಾಡಬೇಕೆಂದರೆ, ಒಂದು ಕೆರೆ ನೀರು ತುಂಬಿಸಬೇಕೆಂದರೂ, ಕಾವೇರಿ ವಿಷಯ tribunal ಮುಂದೆ ಇದೆ, ಅಲ್ಲಿಂತ ತೀರ್ಪು ಬರಬೇಕು ಎನ್ನುವ ಮಾತನ್ನು ಆಡುತ್ತಿದ್ದರು. ಈಗ ಆ ತೀರ್ಪು ಬಂದಿದೆ, expansion ಮಾಡತಕ್ಕಂಥ ಅವಕಾಶವಗಳಿವೆ. ದಯಮಾಡಿ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಇದನ್ನು ಜಾರಿಗೆ ತರುವುದಕ್ಕೆ ಸಾಧ್ಯವಿದೆ ಎಂದು ಸ್ಪಷ್ಟವಾಗಿ ಹೇಳಬೇಕೆಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಉಪಾಧ್ಯಕ್ಷರೆ, ಕಾವೇರಿ ಅಂತಿಮ ತೀರ್ಪು ನಿಜಕ್ಕೂ ನಾವೆಲ್ಲರೂ ಹೆಚ್ಚಿನ ನಿರೀಕ್ಷೆಯಲ್ಲಿ ಇದ್ದೆವು. ನಮಗೆ ದ್ರೋಹವಾಗಿದೆ, ಅದರ ಬಗ್ಗೆ ಏನು ಅನುಮಾನ ಇಲ್ಲ. ಮಾನ್ಯ ಸದಸ್ಯರು ಕಬಿನಿ 2ನೇ ಹಂತದ ಶಂಕುಸ್ಥಾಪನೆ ಯಾವಾಗ ಆಗಿದ್ದು ಎಂದು ಕೇಳಿದ್ದಾರೆ. ಇದು 20 ವರ್ಷಗಳ ಕೆಳಗೆ ಆಗಿದ್ದು. ಇದಕ್ಕೆ First Stage ನಲ್ಲಿ 29 TMC ನೀರನ್ನು ಬಳಸಿದ್ದೇವೆ. Second Stage ನಲ್ಲಿ 19 TMC ನೀರು ಬೇಕೆನ್ನುವ ಲೆಕ್ಕದಲ್ಲಿ ಇದ್ದೇವೆ. ನಾವು 2ನೇ ಹಂತಕ್ಕೆ 65 TMC ನಿರೀಕ್ಷೆಯಲ್ಲಿ ಇದ್ದೇವೆ.

ಶ್ರೀ ಆರ್. ಧ್ರುವನಾರಾಯಣ :– 65 TMC ಬೇಕಾಗಿಲ್ಲ.

ಶ್ರೀ ಕೆ.ಆರ್. ಈಶ್ವರಪ್ಪ :– ನಾವು ನಿರೀಕ್ಷೆಯಲ್ಲಿದ್ದೇವೆಂದು ಹೇಳಿದ್ದೇನೆ. ನಾವು ಅಂತಿಮ ತೀರ್ಪಿನಲ್ಲಿ ನಮಗೆ ಅಷ್ಟಾದರೂ ನೀರು ಬರುತ್ತದೆಂದು ಅಂದುಕೊಂಡಿದ್ದೇವೆ. ಈಗ ಇದಕ್ಕೆ 11.65 TMC ಅಲಾಟ್ ಆಗಿರುವಂಥಾದ್ದು, ಹೀಗಾಗಿ ಇದರಲ್ಲಿ ಭತ್ತವನ್ನು ಬೆಳೆಯುತ್ತಿದ್ದಾರೆ, ಮತ್ತೆ ಖುಷ್ಕಿ ಬೆಳೆಯನ್ನು ಬದಲಾವಣೆ ಮಾಡಿಕೊಳ್ಳಬೇಕೆನ್ನುವ ಯೋಚನೆಯೂ ನಡೆಯುತ್ತಿದೆ. ಅವರು ಅಂತಿಮ ತೀರ್ಪಿನಲ್ಲಿ ಏನೇನು ಹೇಳಿದ್ದಾರೆಂಬುದನ್ನು ತಾವು ಗಮನಿಸಿದ್ದೀರಿ. ಒಂದು ಇದು ಸುಪ್ರೀಂ ಕೋರ್ಟಿಗೆ ಹೋಗಬೇಕೆನ್ನುವ ಬಗ್ಗೆ, ಅದಾದನಂತರ ನ್ಯಾಯಾಧೀಕರಣದ ಮುಂದೆ ಹೋಗಿ ಮರು ಪರಿಶೀಲನೆಗೆ ಹೋಗಬೇಕು. ಇದೆಲ್ಲಾ ಬೇರೆ ವಿಷಯ, ನಾವು ಖಂಡಿತವಾಗಿ ಕಾನೂನು ಬದ್ಧವಾಗಿ ಏನು ಮಾಡಬೇಕೋ ಮಾಡುತ್ತೇವೆ. ಈಗ ಅವರು ಏನು ತೀರ್ಮಾನವನ್ನು ಮಾಡಿದ್ದಾರೆ. ಈ ತೀರ್ಮಾನಕ್ಕೆ ಸರ್ಕಾರ

ಸೀಮಿತವಾಗಿ ಇಲ್ಲ. ನಾವು ಇನ್ನು ಹೆಚ್ಚಿನ ನಿರೀಕ್ಷೆಯಲ್ಲಿ ಇದ್ದೇವೆ. ಇದು ಮೊದಲನೆಯದು, ಆದರೂ ಕೂಡ ಹತ್ತೇ ಟಿಎಂಸಿ ನೀರು ಸಾಕೆಂಬ ಅಂಶವನ್ನು ತಾವು ಏನು ಹೇಳುತ್ತಿದ್ದೀರಿ. ನನಗೆ ಗೊತ್ತಿಲ್ಲ, ಇದರ ಬಗ್ಗೆ ಸರ್ಕಾರದ ಕಳಕಳಿ ಇದೆ. ನಾನು ಮೈಸೂರಿಗೆ ಬಂದು ಹೇಳಿದ್ದೆ, ಏಕೆಂದರೆ ನಿರೀಕ್ಷೆಯಲ್ಲಿ ಇದ್ದೆ, ಕನಸು ಕಾಣುತ್ತಿದ್ದೆವು. ಆ ಸಂದರ್ಭದಲ್ಲಿ ಸುತ್ತೂರು ಮಠದ ಸ್ವಾಮಿಯವರ ಕಾರ್ಯಕ್ರಮಕ್ಕೆ ಬಂದಾಗ ನಮ್ಮ ಎಲ್ಲಾ ರೈತರು ಕಬಿನಿ 2ನೇ ಹಂತದ ಕಾಮಗಾರಿಯನ್ನು ತೆಗೆದುಕೊಳ್ಳುತ್ತೀರಾ ಎಂದು ಕೇಳಿದರು. ನಾನು ಧೈರ್ಯವಾಗಿ ತೆಗೆದುಕೊಳ್ಳುತ್ತೇನೆಂದು ಹೇಳಿದೆ. ಇವತ್ತು ಈ ಸಂದರ್ಭ ಬಂದಿರುವಂಥ ಸಂದರ್ಭದಲ್ಲಿ, ನಮ್ಮ ಸಚಿವರಾದ ಮಾನ್ಯ ಮಹದೇವ್ ಪ್ರಸಾದ್‌ರವರು ಇದನ್ನು ಹೇಗಾದರೂ ಮಾಡಿ ಮಾಡಬೇಕೆಂಬ ಪ್ರಶ್ನೆ ಅವರ ಮನಸ್ಸಿನಲ್ಲೂ ಕೂಡ ಇದೆ. ನಾನು ಒಂದು ಕೆಲಸವನ್ನು ಮಾಡುತ್ತೇನೆ. ಈ ಒಂದು ಕಾಮಗಾರಿಯನ್ನು ತೆಗೆದುಕೊಳ್ಳುವುದರಲ್ಲಿ ಸರ್ಕಾರ ಹಿಂದುಮುಂದು ನೋಡುವುದಿಲ್ಲ, ತೆಗೆದುಕೊಳ್ಳುತ್ತೇವೆ. ಇದನ್ನು ತೆಗೆದುಕೊಂಡು ಯಾವ್ಯಾವ ಕಾಮಗಾರಿಗಳನ್ನು ಮಾಡಿಕೊಳ್ಳಬೇಕು ಎಂದು ತೀರ್ಮಾನಿಸುತ್ತೇವೆ. ಏಕೆಂದರೆ ನಾವು 65 TMC ನೀರಿನ ನಿರೀಕ್ಷೆಯಲ್ಲಿದ್ದಂತಹ ಸಂದರ್ಭದಲ್ಲಿ 11.65 TMC ಬಂದಾಗ, ಹಣ ಸಿಕ್ಕಾಪಟ್ಟೆ ವಿನಿಯೋಗ ಮಾಡಿಕೊಂಡು ರಾಜ್ಯದ ಹಣವೇ ಅನ್ಯಾಯವಾಗಿದೆ. ನಿಮ್ಮ ಜೊತೆಗೆ ನಾವು ಕುಳಿತುಕೊಳ್ಳುತ್ತೇವೆ, ಅದು ಮಾನ್ಯ ವಾಟಾಳ್ ನಾಗರಾಜುರವರು ಇರಬಹುದು, ನಮ್ಮ ಸ್ನೇಹಿತರ ಇರಬಹುದು, ಮಂತ್ರಿಯವರು ಇರಬಹುದು, ಆ ಭಾಗದ ಶಾಸಕರ ಜೊತೆಯಲ್ಲಿ ಕುಳಿತು, ಈಗ ಅಲ್ಲೂ ಕೂಡ Bhadra Modernization ತಮ್ಮ ಗಮನಕ್ಕೆ ಬಂದಿರಬಹುದು. ಅಲ್ಲೂ ಕೂಡ ನೀರು ಸೋರಿ ಹೋಗುತ್ತಾ ಇತ್ತು, ಸುಮಾರು 6 TMC ನೀರು ಸೋರಿ ಹೋಗುತ್ತಿತ್ತು. ಅಲ್ಲೂ ಕೂಡ ಸುಮಾರು 471 ಕೋಟಿ ರೂಪಾಯಿಗಳಷ್ಟು ಹಣಕ್ಕೆ ಟೆಂಡರ್ ಕರೆದು ಕಾಮಗಾರಿಗಳನ್ನು ಮಾಡಿದ್ದೇವೆ, 82 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಮುಗಿಸಿದ್ದೇವೆ. ಸುಮಾರು 4 TMC ನೀರು ಉಳಿದಿದೆ, ಹೀಗಾಗಿ ಎಷ್ಟು TMC ನೀರನ್ನು ಬಳಸಿಕೊಳ್ಳಬೇಕೆಂಬ ಬಗ್ಗೆ ತೀರ್ಮಾನವಾಗಬೇಕು. ಅಷ್ಟು ನೀರನ್ನು ಬಳಸಿಕೊಳ್ಳುವುದಕ್ಕೆ ಎಷ್ಟು ಹಣವನ್ನು

ನಾವು ವಿನಿಯೋಗ ಮಾಡಬೇಕು. ಈ ಎರಡು ವಿಚಾರಗಳನ್ನು ತಮ್ಮ ಜೊತೆಗೆ ಕುಳಿತು ಚರ್ಚೆ ಮಾಡಿ, ಕಬಿನಿ 2ನೇ ಹಂತ ಏನು ಇದೆ, ಪೂರ್ಣ ನಿಲ್ಲಿಸುತ್ತೇವೆಂದು ಹೇಳುವುದಕ್ಕೆ ನಾನು ಇಚ್ಛೆ ಪಡುವುದಿಲ್ಲ. ಇಲ್ಲಿ ಅಂತಿಮ ತೀರ್ಪು ಏನು ಕೊಟ್ಟಿದೆ, ಅದನ್ನೇ ಇಟ್ಟುಕೊಂಡು ಮುಗಿದು ಹೋಯಿತೆಂದು ಒಪ್ಪುವುದಕ್ಕೆ ನಾನು ತಯಾರು ಇಲ್ಲ. ನಾನು ಏನೇನು ಮಾಡುವುದಕ್ಕೆ ಸಾಧ್ಯವಿದೆಯೋ, ಅದನ್ನು ಮಾಡಿ ಸುತ್ತಮುತ್ತಲೂ ಇರುವ ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಅಂದುಕೊಂಡಿದ್ದೇನೆ. ಆ ಭಾಗದಲ್ಲಿ ಹೂಳೆತ್ತುವ ಮುಖಾಂತರ, ಆ ಭಾಗದಲ್ಲಿ ಎಷ್ಟು ಭಾಗ ಹೂಳೆತ್ತಿ ನೀರನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯವಿದೆಯೆಂಬುದನ್ನು ನೋಡುತ್ತೇವೆ. ಒಟ್ಟಾರೆ ಕಬಿನಿ 2ನೇ ಹಂತದ ಕಾಮಗಾರಿಯನ್ನು ನಿಲ್ಲಿಸುವುದಿಲ್ಲ, ಎಷ್ಟು ಶುರು ಮಾಡಬೇಕು, ಎಷ್ಟು ಹಣವನ್ನು ವಿನಿಯೋಗ ಮಾಡಬೇಕೆಂಬುದನ್ನು, ಶಾಸಕರುಗಳ ಜೊತೆಗೆ ಕುಳಿತು ಚರ್ಚೆ ಮಾಡಿ, ನಿಮ್ಮ ಸಲಹೆಗೆ ತಕ್ಕಂತೆಯೇ 2ನೇ ಹಂತದ ಕಾಮಗಾರಿಯನ್ನು ಆರಂಭ ಮಾಡುತ್ತೇವೆ.

ಶ್ರೀ ಡಿ.ಟಿ. ಜಯಕುಮಾರ್ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ನೀರಾವರಿ ಸಚಿವರಾಗಿದ್ದಂತಹ ಸಂದರ್ಭದಲ್ಲಿ, ಮಾನ್ಯ ರಾಚಯ್ಯನವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. 1988 ನೇ ಇಸವಿಯಲ್ಲಿ ಮಾನ್ಯ ಸಿದ್ಧರಾಮಯ್ಯನವರು ಸಚಿವರಾಗಿದ್ದರು. ಆದರೆ 1986ನೇ ಇಸವಿಯಲ್ಲಿ ಇದಕ್ಕೆ ನಾವು ಅಡಿಗಲ್ಲನ್ನು ಸಾಗರಿ ಎಂಬ ಕಟ್ಟೆ ಹತ್ತಿರ ಅಡಿಗಲ್ಲನ್ನು ಹಾಕಿ, ಅದನ್ನು ಮಾಡಬೇಕೆಂದು ಬಂತು. ನಾವು 400 ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದೆವು. ಆದರೆ ಅದು ಬರು ಬರುತ್ತಾ ಕಾವೇರಿ ತೀರ್ಪು ಮಂಡಳಿಗೆ refer ಆಗಿದ್ದರಿಂದ, ಅದನ್ನು ನಿಲ್ಲಿಸಬೇಕಾದಂಥ ಸಂದರ್ಭ ಬಂತು. ಆದರೆ ಈಗ ಸರ್ಕಾರ ಧೈರ್ಯ ಮಾಡಬೇಕಷ್ಟೇ. ಈಗಾಗಲೇ ನಮಗೆ ನೀರನ್ನು ನಿಗದಿಪಡಿಸಿದ್ದಾರೆ, ಕಾವೇರಿ ತೀರ್ಪಿನಲ್ಲಿ ಇಷ್ಟು ನೀರನ್ನು ಉಪಯೋಗಿಸಬೇಕೆಂದು ನಿಗದಿ ಮಾಡಿರುವುದರಿಂದ ಅಷ್ಟರೊಳಗೆ ನಾವು ನೀರನ್ನು ಉಪಯೋಗಿಸಿಕೊಂಡು ಕಬಿನಿ 2ನೇ ಹಂತ ಮಾಡುವುದಕ್ಕೆ ಈಗ ಯಾವುದೇ ಅಡಚಣೆ ಇಲ್ಲ. ಈಗ ಅಡಚಣೆ ಇಲ್ಲದೇ

ಇರುವುದರಿಂದ ಸರ್ಕಾರ ಧೈರ್ಯ ಮಾಡಿ, ಇದಕ್ಕೆ ಸಾಕಷ್ಟು ಹಣ ನಿಗದಿ ಮಾಡಿ ಮಾಡಿಕೊಂಡರೆ, ಮುಂದೆ ನಾವು ಕಾವೇರಿ ತೀರ್ಪು ಮಂಡಳಿ ಬಗ್ಗೆ ಮತ್ತೆ ಅಪೀಲು ಹೋಗಿ ಅಲ್ಲಿ ಹೆಚ್ಚು ನೀರು ಸಿಕ್ಕಿದರೆ ನಮಗೆ ಇದು ಅನುಕೂಲವಾಗುತ್ತದೆ. ಆ ಕಾರಣಕ್ಕೋಸ್ಕರವಾಗಿ ಇದನ್ನು ಯಾವುದೇ ಕಾರಣಕ್ಕೂ ಮುಂದೂಡದೇ ಇದಕ್ಕೆ ಅವಕಾಶ ಕೊಟ್ಟು ಈ ವರ್ಷದ ಬಜೆಟಿನಲ್ಲೇ ಸೇರಿಸಿ, ಈ ಕಾಮಗಾರಿಯನ್ನು ಮಾಡುವುದಕ್ಕೆ ಮಾನ್ಯ ಸಚಿವರು ಧೈರ್ಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈ ಪ್ರಶ್ನೆಗೆ ಮಾನ್ಯ ಸಿದ್ಧರಾಮಯ್ಯನವರು ಉತ್ತರ ಹೇಳಬೇಕೆಂದು ನಾನು demand ಮಾಡುತ್ತೇನೆ. First time Minister ಆಗಿ Supplementary question ಕೇಳಿದ್ದಾರೆ. ತಾವು ಈ ಕಡೆಯಿಂದ ಉತ್ತರವನ್ನು ಈಗ ಕೊಡಿಸಲೇ ಬೇಕು. ತಾವು ದಯಮಾಡಿ ಈಗ ಉತ್ತರವನ್ನು ಕೊಡಬೇಕು. ಇಲ್ಲಿ ಮಂತ್ರಿಗಳು Supplementary question raise ಮಾಡುವುದಕ್ಕೆ ಶುರು ಮಾಡಿಬಿಟ್ಟರೆ, ಶಾಸನ ಸಭೆಯ ಗತಿ ಏನು ಎಂದು ನಾನು ಕೇಳುವುದು. What is going on in the Assembly?

ಶ್ರೀ ಡಿ.ಟಿ. ಜಯಕುಮಾರ್ :– ಅವರು ಏನು ಹೇಳಿದರು?

ಶ್ರೀ ಜೆ.ಸಿ. ಮಾಧುಸ್ವಾಮಿ :– ನೀವು supplementary ಪ್ರಶ್ನೆಯನ್ನು ಕೇಳಿರುವುದರಿಂದ, ಈ ಕಡೆಯಿಂದ ಉತ್ತರವನ್ನು ಹೇಳಲಿ ಎಂದು ಕೇಳಿದೆ.

ಶ್ರೀ ಡಿ.ಟಿ. ಜಯಕುಮಾರ್ :– ಮಾನ್ಯ ಸಿದ್ಧರಾಮಯ್ಯನವರು ಆಗ ಶಾಸಕರಾಗಿ ಇದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಎಲ್ಲಾದರೂ ಉಂಟಾ? ತಾವು ಕ್ಯಾಬಿನೆಟ್ ಮಿನಿಸ್ಟರ್, you are part and parcel of the Government.

ಶ್ರೀ ಡಿ.ಟಿ. ಜಯಕುಮಾರ್ :– ನಾನು ತಮ್ಮ ಮಾತನ್ನು ಒಪ್ಪುತ್ತೇನೆ. ಆ ವಿಷಯ ರೆಕಾರ್ಡ್‌ಗೆ ಹೋಗುವುದರಿಂದ ನಮ್ಮ ಭಾಗ ರೈತರ ಭಾವನೆಗಳನ್ನು ನಾವು ನಮ್ಮ ಭಾಗದ ಶಾಸಕನಾಗಿ ವ್ಯಕ್ತಪಡಿಸಬೇಕಲ್ಲವಾ.....

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಿನಿಸ್ಟರ್ supplementary ಕೇಳಿರುವಂಥಾದ್ದೆಲ್ಲಾ ರೆಕಾರ್ಡ್‌ಗೆ ಹೋಗುತ್ತದಲ್ಲಾ,

(ಗೊಂದಲ)

ಉಪಾಧ್ಯಕ್ಷರು :– ಆಯಿತು ಬಿಡಿ, ಮಾನ್ಯ ವಾಟಾಳ್ ನಾಗರಾಜ್‌ರವರೇ ನೀವು supplementary ಕೇಳಿ.

ಶ್ರೀ ಆರ್. ಧ್ರುವನಾರಾಯಣ : – ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸರ್ವೆ ಕಾರ್ಯ ಮುಗಿದಿದೆ. ಇದಕ್ಕೆ ಸಚಿವ ಸಂಪುಟದಲ್ಲೂ ಮಾನ್ಯ ಸಿದ್ಧರಾಮಯ್ಯನವರು ಇದ್ದಾಗಲೇ ಆಡಳಿತಾತ್ಮಕ ಮಂಜೂರಾತಿ ಸಿಕ್ಕಿದೆ, ಮಾನ್ಯ ಮಹದೇವ ಪ್ರಸಾದ್‌ರವರು ಕೂಡ....

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :– ತಾವು ಮಾನ್ಯ ಸಿದ್ಧರಾಮಯ್ಯನವರ ಹೆಸರನ್ನು ಹೇಳುತ್ತಿದ್ದಿರಲ್ಲಾ, ಏನು ಉದ್ದೇಶ? ಆ time ನಲ್ಲಿ ಕ್ಯಾಬಿನೆಟ್‌ನಲ್ಲಿ ನಾವು ಇದ್ದೆವು, ಅವರು ಇದ್ದರು.

ಒಬ್ಬ ಮಾನ್ಯ ಸದಸ್ಯರು :– ಮೊನ್ನೆ ನಿಮ್ಮನ್ನು ಕಲಾ ಭವನವನ್ನು ಕೊಡಿಯೆಂದು ಕೇಳಿದೆವು. ಅಷ್ಟು ಬೇಗ ಮರೆತುಬಿಟ್ಟಿರಾ?

ಶ್ರೀ ಆರ್ ಧ್ರುವನಾರಾಯಣ :– ಮಾನ್ಯ ಉಪಾಧ್ಯಕ್ಷರೆ, ಕಬಿನಿ ಡ್ಯಾಂ ಇದೆಯಲ್ಲಾ, ಇದರ ಕೆಪ್ಯಾಸಿಟಿ ಬಹಳ ಕಡಿಮೆ ಇದೆ, ಹಾಗಾಗಿ ಏನಾಗುತ್ತದೆಯೆಂದರೆ ಫಸ್ಟ್ ಕೇರಳ ಭಾಗದಲ್ಲಿ ಮಳೆ ಬಿದ್ದಾಗ ಬೇಗ ಡ್ಯಾಂ ತುಂಬುತ್ತದೆ. ಡ್ಯಾಂ ತುಂಬಿದಾಗ ನದಿ ನೀರನ್ನು ಯಥೇಚ್ಛವಾಗಿ ಬಿಟ್ಟು ಬಿಡುತ್ತಾರೆ. ದಯಮಾಡಿ ಸಮುದ್ರಕ್ಕೆ ಹೋಗುವಂಥ ನೀರನ್ನು ತಡೆ ಹಿಡಿದು, ಈ ಯೋಜನೆಗೆ ಚಾಲನೆಯನ್ನು ಕೊಟ್ಟರೆ ಬಹಳಷ್ಟು ಅನುಕೂಲವಾಗುತ್ತದೆ. ತಾವು ತತ್‌ತಕ್ಷಣ ಈ ಯೋಜನೆಗೆ ಚಾಲನೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಈಗ ಮಾನ್ಯ ಮಂತ್ರಿಯವರು ಸುತ್ತಿ ಬಳಸಿ ಹೇಳುವುದು ಬೇಡ. ಈಗ ನಾನು ಆ ರೀತಿಯ ಉತ್ತರವನ್ನು ನಿರೀಕ್ಷಣೆ ಮಾಡಿಲ್ಲ.

ನೇರವಾಗಿ ಈ ಬಗ್ಗೆ ಅವರು ತೀರ್ಪು ಏನೇ ಕೊಟ್ಟಿರಲಿ, ತೀರ್ಪು ಕೊಟ್ಟಿರುವುದರಿಂದ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದೆ. ಅದು ಸ್ಪಷ್ಟ, ಅದನ್ನು ನೀವೂ ಹೇಳಿದ್ದೀರಿ, ನಾವು ಹೇಳಿದ್ದೇವೆ, ಸದನವೇ ನಿರ್ಣಯ ಮಾಡಿದೆ. ಆ ತೀರ್ಪಿಗೋಸ್ಕರ ಕಾಯುವಂಥ ವಿಚಾರ ಬೇಡ. ಆದುದರಿಂದ ತೀರ್ಪು ಏನೇ ಬರಲಿ, ನಾವು ಇದನ್ನು ಆರಂಭ ಮಾಡುತ್ತೇವೆಂಬ ಸ್ಪಷ್ಟ ಭರವಸೆಯನ್ನು ತಾವು ಕೊಡಬೇಕು.

ಶ್ರೀ ಆರ್. ಧ್ರುವನಾರಾಯಣ :– ತೀರ್ಪಿನಲ್ಲಿ ಯಾವುದೇ ಅಡೆತಡೆ ಇಲ್ಲ, expansion ಗೆ ಅಡೆತಡೆ ಇಲ್ಲ. ಆದುದರಿಂದ ತಾವು ತತ್‌ತಕ್ಷಣ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರ ಅಭಿಪ್ರಾಯ ಕೂಡ ನನ್ನದೇ, 2 ನೇ ಹಂತದ ಕಾಮಗಾರಿಯನ್ನು ತೆಗೆದುಕೊಳ್ಳುವುದಿಲ್ಲವೆಂದು ನಾನು ಹೇಳುತ್ತಿಲ್ಲ. ಸರ್ಕಾರ ತೆಗೆದುಕೊಳ್ಳುತ್ತದೆ, ಯಾವ ಹಂತಕ್ಕೆ ತೆಗೆದುಕೊಳ್ಳಬೇಕು? ಎಷ್ಟರಮಟ್ಟಿಗೆ ಹೋಗಬೇಕೆಂಬುದನ್ನು ನಾನು ಹೇಳುತ್ತಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಮಂತ್ರಿಯವರು, ಮಾನ್ಯ ವಾಟಾಳ್ ನಾಗರಾಜ್‌ರವರ ಅಭಿಪ್ರಾಯ ಕೂಡ ನನ್ನದೆಂದು ಹೇಳಿದ್ದೀರಿ.

ಶ್ರೀ ಕೆ. ಎಸ್. ಈಶ್ವರಪ್ಪ :– ಖಂಡಿತ. . .

ಶ್ರೀ ಜೆ.ಸಿ. ಮಾಧುಸ್ವಾಮಿ :– ಆಗಲ್ಲ. ನನ್ನ ಅಭಿಪ್ರಾಯ ಕೂಡ ಅದೇನೆ ಎಂದು ಹೇಳಬೇಕಾಗಿತ್ತು. ನೀವೇ ಹೇಳಿಕೊಟ್ಟು ಹೇಳಿಸುತ್ತಿದ್ದಿರೆಂದು ಆಗುವುದಿಲ್ಲವೇ?

ಶ್ರೀ ಕೆ. ಎಸ್. ಈಶ್ವರಪ್ಪ :– ಇಲ್ಲ, ಅವರು ಹಿರಿಯರು, ಕನ್ನಡದ ಬಗ್ಗೆ, ಕಾವೇರಿ ಬಗ್ಗೆ, ನಮಗೆ ಮಾರ್ಗದರ್ಶಕರು.

ಶ್ರೀ ಸಿದ್ಧರಾಮಯ್ಯ :– ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಬಹಳ ದೀರ್ಘವಾಗಿ ಚರ್ಚೆಯಾಗಬೇಕಾದಂಥ ಅಗತ್ಯವಿಲ್ಲ. ಈಗ ಪ್ರೊಗ್ರಾಮ್ ಏನು ಇದೆ, ಕಬಿನಿ 2 ನೇ ಹಂತದ ಕೆಲಸ ಮಾಡಲೇಬೇಕು. ಅದನ್ನು ಚರ್ಚೆ ಮಾಡಿ,

ಎಷ್ಟು ದುಡ್ಡನ್ನು ಹಾಕಬೇಕು? ಎಷ್ಟು ಉದ್ದ ಮಾಡಬೇಕು? ಎಷ್ಟು ಅಚ್ಚುಕಟ್ಟು ಮಾಡಬೇಕೆನ್ನುವುದಕ್ಕಿಂತ, ನಾವು ಸುಪ್ರೀಂ ಕೋರ್ಟಿಗೆ ಅಪೀಲು ಹಾಕುತ್ತೇವೆಂದು ಈಗ ಸರ್ಕಾರ ತೀರ್ಮಾನಕ್ಕೆ ಬಂದಿದೆ. ಆ ರೀತಿ ತೀರ್ಮಾನಕ್ಕೆ ಬಂದ ಮೇಲೆ, ನಮಗೆ ಇನ್ನು ನೀರು ಹೆಚ್ಚು ಬೇಕು. ನಮಗೆ ಅನ್ಯಾಯವಾಗಿದೆಯೆಂದು ತಾನೇ ನಮ್ಮ ಹೋರಾಟ. ಅದುದರಿಂದ ಈಗಲೇ ನಮಗೆ ಸಿಗುತ್ತದೋ, ಇಲ್ಲವೋ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ನಾವು ಇಷ್ಟೇ ಮಾಡುತ್ತೇವೆ, ಅಷ್ಟೇ ಮಾಡುತ್ತೇವೆಂದು ಉತ್ತರವನ್ನು ಹೇಳುವುದು ಬೇಡ. ನಾವು ಈಗಾಗಲೇ ಏನು ಪ್ರೊಗ್ರ್ಯಾಮ್ ಅನ್ನು ಹಾಕಿಕೊಂಡಿದ್ದೇವೆ. ಆ ಪ್ರೋಗ್ರ್ಯಾಮ್ ಪ್ರಕಾರ Government will go ahead, ಎಂದು ಉತ್ತರ ಕೊಡಬೇಕು. ಅದು ಬಿಟ್ಟು ತಮ್ಮನ್ನು ಕರೆದು ಇಷ್ಟು ಮಾಡುತ್ತೇವೆ, ಇಷ್ಟು ಮಾಡುವುದಿಲ್ಲ, ಇಷ್ಟು ಹಣವನ್ನು ಖರ್ಚು ಮಾಡುತ್ತೇವೆ, ಇಷ್ಟು ಮಾಡುವುದಿಲ್ಲ, ಎಷ್ಟು ಮಾಡಬೇಕು ಎಷ್ಟು ಮಾಡುವುದಿಲ್ಲವೆನ್ನುವ ಉತ್ತರ ಸಮಂಜಸವಲ್ಲ. ಈಗಾಗಲೇ ತೀರ್ಪು ಬರುವುದಕ್ಕಿಂತ ಮುಂಚಿತವಾಗಿ ಏನು ಉದ್ದೇಶ ಸರ್ಕಾರಕ್ಕೆ ಇತ್ತು, ಆ ಕಾರ್ಯಕ್ರಮ ಏನು ಇತ್ತು. ಆ ಕಾರ್ಯಕ್ರಮದ ಪ್ರಕಾರ ಮಾಡುತ್ತೇವೆಂದು ಸರ್ಕಾರ ಉತ್ತರ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ :– ನಾನು ಎಲ್ಲಿಂದ ನೀರು ತರುತ್ತೀರಿ, ಅಲ್ಲಿ ನೀರು ಬೇಕಲ್ಲವೆ?

ಶ್ರೀ ಸಿದ್ಧರಾಮಯ್ಯ :– ಕಾನೂನು ಪ್ರಶ್ನೆ ಏನು ತಂದಿದ್ದೀರಿ, ಅದನ್ನು ಸುಪ್ರೀಂಕೋರ್ಟ್‌ನಲ್ಲಿ ಲಾಯರ್‌ಗಳು ಮಾಡುತ್ತಾರೆ. ಅದು ನಮ್ಮದು ನಿಮ್ಮದು ಅಭಿಪ್ರಾಯ ಅಲ್ಲ. ಸರ್ಕಾರದಿಂದ ಡಿಸಿಷನ್ ಮಾಡುತ್ತಿದ್ದೀರಿ. ಸುಪ್ರೀಂಕೋರ್ಟಿಗೆ ಹೋಗಬೇಕೆ, ಕಾನೂನು ಪ್ರಕಾರ ಏನು ಮಾಡಬೇಕು, ಅದನ್ನು ಮಾಡಿದ್ದೇವೆ, ನೀವು ಒಂದು ತೀರ್ಮಾನವನ್ನು ಮಾಡಿ. ಹಾಗಂತ ಹೇಳಿ, ನಾವೇ ಒಂದು ತೀರ್ಮಾನಕ್ಕೆ ಬರುವುದು ಬೇಡ, ಇಷ್ಟು ಮಾಡೋಣ, ಚರ್ಚೆ ಮಾಡೋಣ, ದುಡ್ಡು ಖರ್ಚು ಮಾಡುವುದು ಬೇಡ. ಸರ್ಕಾರದಿಂದ ಏನೊಂದು ತೀರ್ಮಾನಕ್ಕೆ ಬಂದಿದ್ದೀರಿ, ಅದರ ಪ್ರಕಾರ ಎಲ್ಲಾ ಪ್ರಾಜೆಕ್ಟ್‌ಗಳು "go ahead" ಎಂದು ಹೇಳಿ. ಇಲ್ಲಿ ಕಾನೂನು ಪ್ರಶ್ನೆ ಎಲ್ಲಿ ಬರುತ್ತದೆ?

ಶ್ರೀ ಕೆ.ಎಸ್. ಈಶ್ವರಪ್ಪ :– 65 ಟಿಎಂಸಿ ಗೆ ನಾವು ಕೆಲಸವನ್ನು ಮಾಡಿಕೊಟ್ಟಿದ್ದೇವೆ. ಅವರು 16.65 ಕ್ಕೆ ಹಂಚಿಕೆಯನ್ನು ಮಾಡಿಕೊಟ್ಟಿದ್ದಾರೆ. ಫೈನಲ್ ಅಲ್ಲ, ಅದಕ್ಕಾಗಿ ನಾನು ಹೇಳುತ್ತಿರುವುದು.

ಶ್ರೀ ಕೆ.ಎಸ್. ಈಶ್ವರಪ್ಪ :– ನಾನು ಪ್ರಾರಂಭ ಮಾಡಿದ್ದೇ ಅಲ್ಲಿ. ನೀವು ಅದನ್ನು ಕೇಳಿಸಿಕೊಂಡಿರೋ ಗೊತ್ತಿಲ್ಲ. ಅವರು ಹೇಳಿರುವುದು 11.65, ನಾವು ಕೇಳಿರುವುದು 65 ಎಲ್ಲಿಂದ ಎಲ್ಲಿಗೆ, ಇದಕ್ಕೆ ಸಂಬಂಧವೇ ಇಲ್ಲ. ರಾಜ್ಯದ ದುಡ್ಡನ್ನು ತೆಗೆದುಕೊಂಡು ಹೋಗಿ ಸಿಕ್ಕಾಪಟ್ಟೆಯಾಗಿ ಖರ್ಚು ಮಾಡಿ ಅಷ್ಟು ನೀರು ಬರಲಿಲ್ಲವೆಂದರೆ ರಾಜ್ಯದ ದುಡ್ಡು ನಷ್ಟವಾಗುತ್ತದೆಯೇ ವಿನಃ ಪೂರ್ಣಾವಧಿ ನೀರು ಬರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಈ ಕಾಮಗಾರಿಯನ್ನು ಯಾವುದೇ ಕಾರಣಕ್ಕೂ ತಕ್ಷಣ ಶುರು ಮಾಡುತ್ತೇವೆ. ಇದರಲ್ಲಿ ಹಿಂದೆ ಮುಂದೆ ನೋಡುವ ಪ್ರಶ್ನೆ ಇಲ್ಲ.

ಭೀಮಾ ನದಿಯಿಂದ ನೀರು ಪೂರೈಕೆ

287 (1317) ಶ್ರೀ ಪಾಟೀಲ್ ಎಂ.ವೈ. (ಅಫ್ಜಲ್‌ಪುರ) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಫಜಲಪುರ ಮತಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊಳವೆ ಬಾವಿಗಳನ್ನು ತೋಡಿದರೂ ನೀರು ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರೈತರ ಬಾವಿಗಳಲ್ಲಿಯೂ ಕೂಡ ನೀರು ಇಂಗಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ತಾಲ್ಲೂಕಿನಲ್ಲಿ ಹರಿಯುವ ಭೀಮಾ ನದಿಯಿಂದ ಕೆರೆಗಳಿಗೆ ನೀರು ತುಂಬುವ ಯೋಜನೆ ಕಾರ್ಯಗತವಾದರೆ ಕುಡಿಯುವ ನೀರಿನ ಸಮಸ್ಯೆ ಮತ್ತು ರೈತರ ಬಾವಿಗಳಿಗೆ ನೀರಾವರಿ ಸೌಲಭ್ಯ ದೊರಕಬಹುದೆಂದು ಸರ್ಕಾರ ಯೋಚಿಸಿದೆಯೇ;